Kannad (A) ⓣ

① 3202

"Labourer's Cry" pub. by N. Vishakanta Rao, Santhepet, Mysore in Kannada.
3202
Kannar

|| ಓಂ ||

|| ಪರಬ್ರಹ್ಮಣೇನಮಃ ||

# ಕೆಲಸಕಾರರ ಕೂಗು

ರಾಜಕೀಯದುರಂಧರ



**ಶ್ರೀಜುತ್ ಕೆ. ಟಿ. ಭಾಷ್ಯಂ ಐಯಂಗಾರ್**

(ಮೈಸೂರು ಸಂಸ್ಥಾನದ ಶ್ರಮಜೀವಿಗಳ ಮುಖಂಡರು)

ಲೇಖಕ—ತುರಾಬಿರುದಾರ್ ಬಿ. ನೀಲಕಂಠಯ್ಯನವರ ಶಿಷ್ಯ

**ಎ. ವಿಷಕಂಠರಾವ್, ಮೈಸೂರು**

**1941**

IMPERIAL RECORD DEPARTMENT
Regr. No 3
28 NOV.1941

ವಂದೇಮಾತರಂ.

ಭಾರತದೇಶದಲ್ಲಿ
ಉತ್ತಮದರ್ಜೆಗೆ ಸೇರಿದ
ಬೀಡಿಗಳೆಂದರೆ

# "ಕಾಂಗ್ರೆಸ್"

(ಟ್ರೇಡ್‌ಮಾರ್ಕ್)

NATIONAL ARCHIVES LIBRARY
No 3202
Date 3.4.72
GOVT. OF INDIA

ಇದು

ಭಾರತದೇಶದ ಎಲ್ಲಾ ಕಡೆಗಳಲ್ಲಿಯೂ

ದೊರೆಯುತ್ತದೆ.

ತಮಗೆ ಬೀಡಿಗಳು ಬೇಕಾಗಿದ್ದಲ್ಲಿ

# "ಕಾಂಗ್ರೆಸ್"

(ಟ್ರೇಡ್‌ಮಾರ್ಕ್)

ಎಂಬ ಹೆಸರುಳ್ಳದ್ದನ್ನೇ ನೋಡಿ
ತೆಗೆದುಕೊಳ್ಳಿರಿ.

TRADE MARK CONGRESS REGISTERED

ಮಾಲೀಕರು:—
M.R.C. ಬಸಪ್ಪ ಅಂಡ್ ಸನ್.

ಪತ್ರವ್ಯವಹಾರ:—
ಜ್ಯೂಬಿಲಿ ಸ್ಟೋರ್ಸ್,
ಮೈಸೂರು.

|| ಓಂ ||

# ಕೆಲಸಕಾರರ ಕೂಗು.

**ಲಾವಣಿ ಧಾಟಿ—ಖಡಿಚಾಲ್**

ಕೆಲಸಕಾರರಾ-ಹಸಿವಿನ ಕೂಗೂ-ಇಂದು ನಮ್ ಸಹೋದ್ಯೋಗಿಗಳ |
ಲಲಿತಕಂಠದಿಂದುದಿಸಿ ಸಾರುತಿದೆ-ಕ್ರಾಂತಿಪ್ರಪಂಚದ ಗೀತೆಗಳ ||ಪ||

ಬಡತನಮತ್ತಾ ನಿರುದ್ಯೋಗ ದಬ್ಬಾಳಿಕೆ ದಾಳಿಗಳೊಗ್ಗಿನಲಿ |
ಕಡುತರಕಷ್ಟವನನುಭವಿಸಿದನಾವ್-ಇಂದುಜಗತ್ತಿನ ಎದುರಿನಲಿ ||
ಬೇಡುತಲಿರುವುದು-ಹೊಟ್ಟೆಯತುಂಬಾ-ಅನ್ನವನೀಡಿರಿಯೆನ್ನುತಲಿ |
ಕಾಡುತಲಿರುವುದು-ಮಾನವಮುಚ್ಚಲು-ಬಟ್ಟೆಯುಬೇಕೆಂದೆನ್ನುತಲಿ ||
ಘುಡಿಘುಡಿಸೆಗರುವ-ಗುಂಡಿನಹೊಡೆತವು--ಬೆದರಿಸಲಾರದುನಮಗಿಲ್ಲಿ |
ಒಡನೆ ಮರಣಭಯದಂಜಿಕೆಬಿಟ್ಟೆವು ಇಂದುನಮ್ಮದುರ್ದೆಸೆಯಲ್ಲಿ ||

|| **ಚಾಲುಡಾ್ರ** ||

ದಾಳಿದಬ್ಬಾಳಿಕೆ-ಹೊಡೆತಕೆಸಿಕ್ಕೀ-ನುಚ್ಚುನೂರಾಗಿಹನಾವಿಂದು |
ಇಳೆಯೊಳು ಜೀವಶ್ರವಗಳಿಗಿಂತಲು-ನಿಸ್ತೇಜಕರಾಗಿಹೆವೆಂದು ||
ಹೇಳಿಕೊಂಡರದು-ಅತಿಶಯವಲ್ಲವು-ಒಡನಾಡಿಗಳೇ ಇನ್ನೊಂದು |
ತಾಳುಮೆಯಿಂದಲಿ-ವಿಶ್ವದಕೂಲೀಕಾರರ ಐಕ್ಯತೆಯೊಳುನಿಂದು ||

|| **ಶ್ಲೋಕ** ||

ವಿಜಯಮಾಲೆಯ-ಧರಿಸಲೋಸುಗ-ನೂತನಾಶ್ರಿತಪಥದಲಿ |
ಅಜಿತಶಕ್ತಿಯ-ಪಡೆದುದಾದರೆ-ವಿಜಯನಮ್ಮದು ಕೊನೆಯಲಿ ||

|| **ದೊಡ್ಡುಡಾ್ರ** ||

ಅನೇಕಸಲನಾವ್-ಬಂಧಿಸಲ್ಪಟ್ಟೆವು-ಹಿಂಸಿಸಲ್ಪಟ್ಟೆವು ಕೊನೆಕೊನೆಗೆ |
ಅನುಭವಿಸಿದೆವೂ-ಕಾರಾಗೃಹದಾ-ಕಗ್ಗತ್ತಲೆ ಕಾಠಿಣ್ಯತೆಗೆ ||

ತನುಮನಧನಗಳ-ನೀಡುತನಮ್ಮಯ-ಸ್ವಾತಂತ್ರ್ಯಸಿದ್ಧಿಗೆಮುದದೊಳಗೆ ।
ಅನುದಿನದುಡಿಯುತ-ನಮ್ಮಕರ್ತವ್ಯವ ನಾವೇಮಾಡ್ವೆವು ಧೃಡದೊಳಗೆ ॥

**॥ ಚಿಕ್ಕ್ಕಿಡಾ್ ॥**

ಕ್ಷಿತಿಪದಾರ್ಥದುತ್ಪತಿ ಕಾರಣಕರ್ತರು ನಾವು ।
ಅತಿಕಷ್ಟಸಹಿಷ್ಣುತೆಲೆಮ್ಮ ಉದ್ಯಮದಿ ಹಲವು ॥
ಧೃತಿಯೊಡೆದ ಪದಾರ್ಥಗಳುತ್ಪನ್ನವಾಗ್ವುದುದಿನವು ।
ಇತಿಹಾಸಪ್ರಸಿದ್ಧವಾಗಿರುವುದು ವಿಷಯವು ನಿಜವು ॥

**॥ ಗುಲ್ಲುಡಾ್ ॥**

ನಮ್ಮ ಸ್ವಾತಂತ್ರ್ಯ ಪ್ರಾಪ್ತಿಗಾಗಿ ।
ಒಮ್ಮೆ ನಾವಿಂದು ಘೋರವಾಗಿ ।
ನಮ್ಮ ಹಕ್ಕುಬಾಧ್ಯತೆಗಳಿಗಾಗಿ ॥
ನೆಮ್ಮಿ ಸಂಗ್ರಾಮವ-ಮಾಡಬೇಕಾಗಿ-ಇರುವುದು ನಿಜವಾಗಿ ॥

**॥ ಶ್ಲೋಕ ॥**

ಹಿಂದಿನಾ ಕಾರಿರುಳ ಕತ್ತಲೆಯಿಂದ ಬೆರೆತಜ್ಞಾನವ ।
ಇಂದು ಧೈರ್ಯದಿ-ಹರಿದುಚಲ್ಲುವ-ದಿನವಿದಾಗಿದೆಯೆನ್ನುವ ॥

**॥ ಚಾಲ್ ॥**

ಕೆಲಸಕಾರರೂ-ಹೇಡಿಗಳಲ್ಲವೆಂದೊತ್ತಿ ಹೇಳುತಿಹ ಸಮಯಗಳ ।
ಲಲಿತಕಂಠದಿಂದುದಿಸಿ ಸಾರುತಿದೆ ಕ್ರಾಂತಿ ಪ್ರಪಂಚದ ಗೀತೆಗಳ ॥೧॥

ಅರುಣಕಿರಣದಾ ದಿವ್ಯಜ್ಯೋತಿಯಿಂದೆಮ್ಮ ಹೃದಯಮಂದಿರವನ್ನು ।
ಪರಮ ಪ್ರತಾಪದಿ ವಿಕಾಸಗೊಳಿಸೀ ಪ್ರಕಾಶಗೊಳಿಸಿದೆ ನಿಜವಿನ್ನು ॥
ಧರಣಿಮಂಡಲದಿ ನಾವು ಕಂಗೆಟ್ಟಾ ಕೆಲಸಕಾರರಿರಬಹುದಿನ್ನು ।
ಪರಿಕಿಪುದಾದರೆ ನಮ್ಮ ಹೃದಯಗುಡಿ ಪವಿತ್ರವಾಗಿದೆ ಧರೆಲಿನ್ನು ॥
ನಿರಂತರವು ಅಭಿಮಾನ ಜ್ಯೋತಿಯಾ ಕಿಡಿಗಳೆಂದೆನಿಸಿದ ನಾವಿನ್ನು ।
ಪರಾಕ್ರಮದಿ ಮುಂದಡಿಯನುಯಿಟ್ಟರೆ ಖಂಡಿತ ವಿಜಯವುನಮದಿನ್ನು ॥

|| ಚಾಲುಡಾರ್ ||

ವಿಶ್ವದಸುತ್ತಲು ನಮ್‌ಸಂದೇಶದ ಘೋರಸ್ವರೂಪವು ಕಾಣುತಿದೆ |
ವಿಶ್ವದಲ್ಲೆ ನಮ್ ಶಾಂತಿಘರ್ಜನೆಯ ಕ್ರಾಂತಿ ಪ್ರತಿಧ್ವನಿಯಾಗುತಿದೆ ||
ಈಶ್ವರಸಾಕ್ಷಿಲಿ ಧನಿಕರದಾಳಿಯ ಅನುಭವಿಸಿದ ನಮ್‌ಆತ್ಮವೆುಡಿ |
ನಶ್ವರವೆನಿಸಿದ ಭಯದಭೀತಿಯನು ಬಿಡಿಸಿ ರಕ್ತವನು ಕುದಿಸುತಿದೆ ||

|| ಶ್ಲೋಕ ||

ಜಗದಿ ನಮ್ಮೊಡನಾಡಿಗಳು ಬಹು ಶೂರರಿರುವರು ತಿಳಿಯಿರಿ |
ತೆಗೆದು ಒಗೆಯಿರಿ ದಾಸ್ಯಶೃಂಖಲೆ ದಾಸ್ಯಸುಖ ಸಾಕೆನ್ನಿರಿ ||

|| ದೊಡ್ಡಡಾರ್ ||

ಅರಣ್ಯ ವಾಸಕಿಂತಸಾಧ್ಯವೆನಿಸಿದ ಸೆರೆಮನೆ ಆನಂದವು ಸಾಕು ||
ನಿರಾಯುಧರು ನಮ್ಮೊಡನಾಡಿಗಳೇ ಮುಂದುವರಿವ ಧೃಡವಿರಬೇಕು ||
ಧರಣಿಯೊಳಗೆಧೃಡಪ್ರತಿಜ್ಞೆ ಯೆದುರೊಳುಆಯುಧಸಾಮರ್ಥ್ಯವುಝೋಕು
ಕಾರಣ ಸ್ಥಿರಸಂಕಲ್ಪದಿ ನಮ್ಮೆದುರಾಳಿಯ ಇದರಿಸುವುದೆ ಠೀಕು ||

|| ಚಿಕ್ಕಡಾರ್ ||

ಆ ಗಗನವ ನೋಡಲು ರಕ್ತವರ್ಣ ಛಾಯೆಯಲಿ |
ಝುಗಝುಗಾಯಮಾನದಿ ಹೊಳೆಯುತಿಹುದು ಪ್ರತಿಭೆಯಲಿ ||
ಹಗೆಹಸಿವಿನೊಳಂತ್ಯವ ಪಡೆದ ನಮ್ಮ ಹಿರಿಯರಲಿ |
ಮಿಗೆ ಸ್ಫೂರ್ತಿಯೊಳುದಿಸಿದ ಸಂದೇಶವೆ ಯಿದುಕುಶಲಿ ||

|| ಗುಲ್ಲುಡಾರ್ ||

ಅದೇನಮ್ ಭಾವೀಸ್ವರಾಜ್ಯಸಿರಿ |
ಇದೇ ಕಣ್ಣೀರ ಕಣಗಳಾರಿ |
ಹೋದುದೂ ಭೀತಿಯಂತ್ಯಸೇರಿ |
ಮೊದಲಿನ ಗತ ಸಂವತ್ಸರಗಳತೆರ ಮುಂದಕ್ಕಲ್ಲ ದಾರಿ ||

|| ಶ್ಲೋಕ ||

ಪರಮ ಭಾವೀ ದಿನಗಳನು ಕಣ್ಣೀರ ಕಾಲುವೆಯಲ್ಲಿಯೇ |
ನಿರುತಕಳೆಯುವ ಹಾಗೆಯಿಲ್ಲವು ಮುಂದುವರೆಯಿರಿ ಪೂರ್ತಿಯೇ ||

|| **ಚಾಲ್** ||

ಬಲುಮೆಯಾಂತ ಸ್ವಾತಂತ್ರ್ಯಮಂತ್ರದ ಸಹಸ್ರಾರ್‍ಯೋಧರ ಶಕ್ತಿಗಳ |
ಲಲಿತಕಂಠದಿಂದುದಿಸಿ ಸಾರುತಿದೆ ಕ್ರಾಂತಿ ಪ್ರಪಂಚದ ಗೀತೆಗಳ ||೨||

ಪ್ರಗತಿಪ್ರಪಂಚದ ಯಾವ ಶಕ್ತಿಯೂ ಇದರಿಸಲಾರದು ನಮ್ಮನ್ನು |
ಹಾಗೆಯೆನಮ್ಮಗ್ಳ ಐಕ್ಯತೆಸಖ್ಯವ ಮುರಿಯಲಾರದದು ಮುಂದಿನ್ನು ||
ಬಗೆಬಗೆಬೆಳಗುವ ತೋಳುಶಕ್ತಿಯನು ಕುಗ್ಗಿಸಲಾರದು ಮತ್ತಿನ್ನು |
ಹೀಗೆಯೆಂದಮೇಲ್ ವಿಳಂಬವೇತಕೆ ಹರಿದೊಗೆಯಿರಿ ಬಂಧನವನ್ನು ||
ಅಗಣಿತವಿಶ್ವದ ಯಾವಪ್ರಾಣಿಯೂ ದಾಸ್ಯದೊಳಿರಬಾರದುಯಿನ್ನು |
ರೋಗಗ್ರಸ್ತಯಿೂ ದಾಸ್ಯದಅನ್ನವ ಭುಂಜಿಸಬಾರದು ನಾವಿನ್ನು ||

|| **ಚಾಲುಡಾ** ||

ನವಶಕ್ತಿಯನಮ್ ಸಹೋದ್ಯೋಗಿಗಳ ಪ್ರಚಂಡನರನಾಡಿಗಳಲ್ಲಿ |
ಯೌವನದೇರಿಕೆ ಬಿಸಿಬಿಸಿರಕ್ತವು ಹರಿಯುವವರೆವಿಗೆ ಜಗದಲ್ಲಿ ||
ಯಾವಪ್ರಭಾವದ-ದೈವಸಹಾಯವು-ಬೇಡಬೇಡಯೆಂದೆನುತಿಲ್ಲಿ !
ಪಾವನಭಾವನೆಲುಸುರಲಪೇಕ್ಷಿಸಿ--ಘೋಷಿಸುತಿರುವೆವುಮುದದಲ್ಲಿ ||

|| **ಶ್ಲೋಕ** ||

ನಮ್ಮ ಮಕ್ಕಳು ಮರಿಗಳನ್ನೀ ದಾಸ್ಯಪಂಜರದಿಂದಲೂ |
ಹಮ್ಮುಹಸಿವಿನ ಕಿಚ್ಚಿನಿಂದಲು-ಬಿಡಿಸಿ, ರಕ್ಷಿಸಿಮುಂದೊಳು ||

|| **ದೊಡ್ಡುಡಾ** ||

ಅವರಿಗಾಗಿ ಸ್ವಾತಂತ್ರ್ಯಸದನವನು-ನಿರ್ಮಿಸಲಿರುವೆವು ಧೈರ್ಯದಲಿ |
ಅವರಿಗಾಗಿನಮ್ ಪ್ರಾಣವಾಯು ಸಂಚರಿಸುವವರೆವಿಗೆ ಸ್ಥೈರ್ಯದಲಿ ||
ಭುವನಬ್ರಹ್ಮಾಂಡದಿ ನಮ್ಮಪೌರುಷದ-ಭೀಷ್ಮಪ್ರತಿಜ್ಞೆಯುಪ್ರತಿಭೆಯಲಿ|
ಯಾವಪ್ರಕಾರದ ಸಾಹಸದಿಂದಲು-ಅಂತ್ಯವಪಡೆಯದು ಪೃಥ್ವಿಯಲಿ ||

|| **ಚಿಕ್ಕುಡಾ** ||

ಅಜ್ಞಾನಕೂಪದಲ್ಲಿದ್ದ ಜನಾಂಗವುಯಿಂದು |
ಸುಜ್ಞಾನಜ್ಯೋತಿಯಿಂ ಮೆರೆಯುತಲಿರುವುದುಯೆಂದು ||

ವಿಜ್ಞಾನಿಗಳುಸುರಿದಮೇಲೆ ಅಂಜಲೇಕೆಂದು ।
ವಿಜ್ಞಾಪನೆಮೂಲಕ ಪ್ರಾರ್ಥನೆಗೈವೆವುಮುಂದು ॥

॥ **ಗುಲ್ಲುಡ್ಗಾ** ॥

ಬೆಂಬಿಡದನಮ್ಮ ವಿಜಯವಾಗಿ ।
ಅಂಬರದಿ ನವಜ್ಯೋತಿ ಬೆಳಗಿ ।
ಕುಂಭಿಣಿಗೆ ಬೆಳಕಕೊಡುವುದೆರಗಿ ॥
ಗಂಭೀರತೆ ಸಂಗ್ರಾಮದಿ ಜಯವನುಹೊಂದ್ವೆವು ಅನುವಾಗಿ ॥

॥ **ಶ್ಲೋಕ** ॥

ಹಿಂದಿನೊಲು ಹಿಂಜರಿಯಲಾರೆವು ನಾವು ಯಿಂದು ಸ್ವಶಕ್ತಿಲಿ ।
ಮುಂದುವರಿಯುವ ಧೀರಸೈನಿಕರಾಗಿ ಇರುವೆವು ಪೃಥ್ವಿಲಿ ॥

॥ **ಚಾಲ್** ॥

ಸುಲಭ ಸನಾತನ ಶೇಷನಗಿರಿಹರಿ ಪುಟ್ಟನಂಜಣ್ಣರ ಸೈನ್ಯಗಳ ।
ನೀಲಕಂಠದಿಂದುದಿಸಿಸಾರುತಿದೆ ಕ್ರಾಂತಿಪ್ರಪಂಚದ ಗೀತೆಗಳ ॥೫॥

**ಸಶೇಷ**

---

**ಸಹೋದರ ಸಹೋದರಿಯರಲ್ಲಿ ವಿಜ್ಞಾಪನೆ :—**

ಸ್ವದೇಶಿ ವಸ್ತು ಮತ್ತು ಕಲಾಭಿಮಾನಿಗಳಾದ ತಾವುಗಳು ಒಂದಾವರ್ತಿ ದಯೆಮಾಡಿ ಪರೀಕ್ಷಿಸಿ ಪ್ರೋತ್ಸಾಹಿಸಬೇಕಾಗಿ ಕೋರಿಕೆ.

**ಮೈಸೂರು ಅರಮನೆಗೆ ಸುಗಂಧದ್ರವ್ಯಗಳನ್ನು ಸರಬರಾಯಿ ಮಾಡುವ**

## ಶ್ರೀ ಸತ್ಯನಾರಾಯಣ ಪರಿಮಳ ಫ್ಯಾಕ್ಟರಿ, ಮೈಸೂರು

ಇವರ ಶ್ರೇಷ್ಠವಾದ "**ಪರಿಮಳ ಅಗರಬತ್ತಿ**" ಮುಂತಾದ ಸುಗಂಧದ್ರವ್ಯಗಳನ್ನು ಉಪಯೋಗಿಸಿರಿ.

ಗಜಾನನ ಪವರ್ ಪ್ರಿಂಟಿಂಗ್ ವರ್ಕ್ಸ್, ಮೈಸೂರು.

**Pure Ghee PREPARATIONS Guaranteed!**

**SRI KRISHNA BHAVAN RESTAURANT & PROVISION STORES, MYSORE**

**High class Caterers to Palace, Govt. & Public Bodies. Please visit once!**

**TESTIMONIALS**

Chamundi Vihar, Mysore.
Dated, 18th June 1941

I am immensely pleased to learn that the Manager and the Proprietors of Krishna Bhavan Hotel, Mysore afforded excellent food arrangement to the Kotda-Sangani Barat party during their stay here, and I am much satisfied to note that the catering was very good and everybody was fully satisfied with the prompt and courteous services of the hotel staff.

(Sd.) ***K. Pradyumna Sinh,***
Thakore Saheb, Kotda-Sangani

Park House, Mysore.
22nd June 1941.

The Sri Krishna Bhavan Restaurant catered for the marriage party which had come to Mysore on the occassion of the auspicious marriage of His Highness the Maharaja of Bharatpur with the youngest sister of His Highness the Maharaja of Mysore. The catering was excellent. There was a large variety of dishes, all well cooked and designed to suit North Indian as well as South Indian tastes. The service was also quite satisfactory and the Manager Mr. P. V. Rama Ayer was most obliging.

(Sd.) ***K. P. S. Menon,*** I. C. S.
Dewan, Bharatpur State, Rajputana.

The Manager Krishna Bhavan Mysore was in charge of the catering arrangement of the Barat Party of the Kotda-Sangani State from 10th to 16th June 1941.

I found his catering excellent; though the food in Kathiawar differs from Southern India, the party could not find any distinction. I am grateful to the Manager-in-charge.

Mysore,
16-6-41.

(Sd.) ***Mr. J. H. Buch,***
Dewan, Kotda-Sangani State.

**Best & Cleaned Provisions available here.**